**ದಿಃ 02-09-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.**
**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು SSLC ಓದಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ. ದೂರನ್ನು ನನ್ನ ಮೇಲಾಧಿಕಾರಿ ಬರೆದಿದ್ದಾರೆ. ದೂರನ್ನು ಬರೆಯಲು ನನಗೆ ಯಾವದೇ ತೊಂದರೆ ಇರಲಿಲ್ಲ. ಘಟನೆಯು ಯಾವ ದಿನಾಂಕದಂದು ಆಯಿತು ಎಂದರೆ ಸಾಕ್ಷಿಯು ದಿಃ 24 ರಂದು ಸಾಯಂಕಾಲ 4.30 ಗಂಟೆಗೆ ಆಗಿದೆ ಎನ್ನುತ್ತಾರೆ. ಅಂಕಲಗಿ ಬಸ್ ನಿಲ್ದಾಣದಲ್ಲಿ ಸುಮಾರು ಜನರು ಹಾಗೂ ಅವರ ಓಡಾಟ ಇರುತ್ತದೆ ಎಂದರೆ ಸರಿ. ಘಟನೆಯಾದಾಗ 50-60 ಜನರಿದ್ದರು. ಸದರಿ 50-60 ಜನರ ಹೆಸರು ಹೇಳಲು ಬರುವುದಿಲ್ಲಾ. ಅಂಕಲಗಿ ಬಸ್ ನಿಲ್ದಾಣದ ಸುತ್ತಮುತ್ತಲು ವಾಹನಗಳನ್ನು ನಿಲ್ಲಿಸಲು ಜಾಗ ಇದೆ ಎಂದರೆ ಸರಿ. ಸದರಿ ಅಂಕಲಗಿ ಬಸ್ ನಿಲ್ದಾಣದ ಸುತ್ತಮುತ್ತಲು ಜನರು ತಮ್ಮ ವಾಹನವನ್ನು ನಿಲ್ಲಿಸಿರುತ್ತಾರೆ ಎಂದರೆ ಸರಿ.

ದಿಃ 25.06.2022 ರಂದು ದೂರನ್ನು ಸಲ್ಲಿಸಿರುತ್ತೇನೆ. ದಿಃ 24.06.2022 ರಂದು ಯಾಕೆ ದೂರನ್ನು ಸಲ್ಲಿಸಿರುವುದಿಲ್ಲಾ ಎಂದರೆ ಸಾಕ್ಷಿಯು ನನ್ನ ಮೇಲಾಧಿಕಾರಿಯವರಿಗೆ ಕೇಳಿ ದೂರನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ. ನನ್ನ ಮೇಲಾಧಿಕಾರಿಯವರು ದೂರನ್ನು ದಾಖಲಿಸಲು ಹೇಳಿದ್ದರಿಂದ ಈ ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 24.06.2022 ರಂದು ಯಾವದೇ ಘಟನೆ ಆಗಿಲ್ಲಾ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಚಾ.ಸಾ-1 ಪ್ರಾ.ಸಾ-1**

**ಮರು ವಿಚಾರಣೆಃ** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

**(ಶ್ರೀ. ಅಭಿನಯ)**

**C/c 2 ನೇ ಹೆ.ದಿ.&ನ್ಯಾ .ದಂ.,ಗೋಕಾಕ.**